## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1032 (1214) |
| ಸದಸ್ಯರ ಹೆಸರು | : | **ಶ್ರೀ ಯು.ಬಿ ವೆಂಕಟೇಶ್(ನಾಮ ನಿರ್ದೇಶನ ಹೊಂದಿದವರು)** |
| ಉತ್ತರಿಸುವ ದಿನಾಂಕ | : | 15.12.2023 |
| ಉತ್ತರಿಸುವ ಸಚಿವರು | : | ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲ್ಯಾಣ ಕರ್ನಾಟಕವನ್ನು ಅಕ್ಷರಶಃ ಕಲ್ಯಾಣ ರಾಜ್ಯವನ್ನಾಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಕಲ್ಯಾಣ ಕರ್ನಾಟಕವನ್ನು ಕಲ್ಯಾಣ ರಾಜ್ಯವನ್ನಾಗಿಸಲು ಭಾರತ ಸಂವಿಧಾನ 371ಜೆ ಅಡಿ ವಿಶೇಷ ಸ್ಥಾನಮಾನ ನೀಡಿ, ಉದ್ಯೋಗ, ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ನೀಡಲಾಗಿದೆ ಹಾಗೂ ಆ ಭಾಗಕ್ಕೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಹಾಗೂ ವಿಶೇಷ ಅಭಿವೃದ್ಧಿ ಯೋಜನೆಯಡಿ ಹೆಚ್ಚಿನ ಅನುದಾನ ನೀಡಿ, ಕಲ್ಯಾಣ ಕರ್ನಾಟಕ ಭಾಗದ ಸರ್ವಾಂಗೀಣ ಅಭಿವೃದ್ಧಿಗೆ ಕ್ರಮವಹಿಸಲಾಗಿದೆ.<br><br>2013-14 ರಿಂದ 2022-23ನೇ ಸಾಲಿನವರೆಗೆ ರೂ.11878.33 ಕೋಟಿಗಳನ್ನು ನಿಗಧಿಪಡಿಸಿ, ರೂ.10229.00 ಕೋಟಿಗಳನ್ನು ಮಂಡಳಿಗೆ ಬಿಡುಗಡೆ ಮಾಡಿ ರೂ.8334.00 ಕೋಟಿಗಳನ್ನು ವೆಚ್ಚ ಭರಿಸಲಾಗಿದೆ, ಮಂಡಳಿಯ ವ್ಯಾಪ್ತಿಯಲ್ಲಿ ಶಿಕ್ಷಣ, ಆರೋಗ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಕೈಗಾರಿಗೆ, ಕೌಶಲ್ಯಾಭಿವೃದ್ಧಿ, ನೀರಾವರಿ, ಕುಡಿಯುವ ನೀರು, ರಸ್ತೆ ಮತ್ತು ಸಂಪರ್ಕ, ಅಂತರ್ಜಲ ಸಂರಕ್ಷಣೆ ಹಾಗೂ ಕೃಷಿ ಹಾಗೂ ಕೃಷಿಗೆ ಸಂಬಂಧಿತ ವಲಯಗಳಲ್ಲಿ ಅಭಿವೃದ್ಧಿ ಅಂತರಗಳನ್ನು ಗುರುತಿಸಿ, ಆದ್ಯತೆಗನುಗಣವಾಗಿ 29263 ಯೋಜನೆಗಳನ್ನು ಕೈಗೊಳ್ಳಲಾಗಿದೆ.<br><br>ಮುಂದುವರೆದು, ಸಿ.ಸಿ. ರಸ್ತೆ, ಡಾಂಬರೀಕರಣ ರಸ್ತೆ, ಸೇತುವೆ, ಚರಂಡಿ, ಒಳಚರಂಡಿ ನಿರ್ಮಾಣ, ಕುಡಿಯುವ ನೀರು ಸರಬರಾಜು, ಕೆರೆಗಳ ನಿರ್ಮಾಣ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಅಭಿವೃದ್ಧಿ ಮಾಡಲಾಗಿದೆ. |
| ಆ) | ಸ್ಥಳೀಯ ಜನರ ತಲಾದಾಯ ಶಿಕ್ಷಣ ಆರೋಗ್ಯ ಮತ್ತು ಮೂಲ ಸೌಕರ್ಯಗಳ ಅಭಿವೃದ್ಧಿಗೆ ಸರ್ಕಾರ ಒತ್ತು ನೀಡಿದೆಯೇ; | -ಹೌದು-<br><br>ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ನಿಗದಿಯಾಗಿರುವ ಅನುದಾನದಿಂದ 2013-14ನೇ ಸಾಲಿನಿಂದ 2022-23ನೇ ಸಾಲಿನ ವರೆಗೆ ಶೈಕ್ಷಣಿಕ ವಲಯಕ್ಕೆ ಶೇ. 25% ರಷ್ಟು, ಆರೋಗ್ಯ ವಲಯಕ್ಕೆ ಶೇ. 8% ರಷ್ಟು, ರಸ್ತೆ ಮತ್ತು ಸಂಪರ್ಕ ವಲಯಕ್ಕೆ ಶೇ. 49% ರಷ್ಟು ಇತರೆ ವಲಯಕ್ಕೆ ಶೇ.6% ರಷ್ಟು ಅನುದಾನವನ್ನು ಒದಗಿಸಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.<br>ಸ್ಥಳೀಯ ಜನರ ತಲಾದಾಯ ಶಿಕ್ಷಣ, ಆರೋಗ್ಯ ಮತ್ತು ಮೂಲ ಸೌಕರ್ಯಗಳ ಅಭಿವೃದ್ಧಿ ಪಡಿಸಲು ಮಂಡಳಿಯಿಂದ ಕೈಗೊಂಡ ಕೆಲವು ಪ್ರಮುಖ ಕಾಮಗಾರಿಗಳ ವಿವರ ಈ ಕೆಳಗಿನಂತಿವೆ. |

| | | |
|---|---|---|
| | | • ಇಂಜಿನಿಯರಿಂಗ್ ಕಾಲೇಜುಗಳ ನಿರ್ಮಾಣ.<br>• ಕೊಪ್ಪಳ ಜಿಲ್ಲೆಯ ಕೂಕನೂರು ತಾಲ್ಲೂಕಿನ ವಿಶ್ವ ವಿದ್ಯಾನಿಲಯದ ಸ್ನಾತಕೊತ್ತರ ಕೇಂದ್ರ ಮತ್ತು ವೃತ್ತಿ ಕೌಶಲ್ಯ ಅಭಿವೃದ್ಧಿ ಕೇಂದ್ರ ನಿರ್ಮಾಣ.<br>• ಕಲ್ಯಾಣ ಕರ್ನಾಟಕ ಭಾಗದ ಉದ್ಯೋಗ ಆಕಾಂಕ್ಷೆಗಳಿಗೆ ತರಬೇತಿ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಭಾಗವಹಿಸಲು ಬರುವ ಆಕಾಂಕ್ಷೆಗಳಿಗೆ ತಂಗಲು ಅನುಕೂಲವಾಗುವ ದೃಷ್ಟಿಯಿಂದ ಬೆಂಗಳೂರಿನ ಹೆಚ್.ಆರ್.ಎಸ್. (HSR) ಬಡಾವಣೆಯಲ್ಲಿ ಹಾಸ್ಟೆಲ್ ಹಾಗೂ ಆಡಳಿತ ಕಛೇರಿ ನಿರ್ಮಾಣ.<br>• Setting up of cardiac center by Jayadeva Insitiue in Kalaburgi<br>• Construction of proposed SJICR Hospital including Medical Equipments.<br>• ಕೋವಿಡ್-19 ತಡಗಟ್ಟುವಿಕೆ ಹಾಗೂ ನಿಯಂತ್ರಣಕ್ಕೆ ಸಂಬಂಧ ಪಟ್ಟಂತೆ ಕ.ಕ.ಪ್ರದೇಶದ ಎಲ್ಲಾ ಜಿಲ್ಲೆಗಳಿಗೆ ವೈದ್ಯಕೀಯ ಉಪಕರಣಗಳ ಸರಬರಾಜು.<br>• Magnetic Resonance imaging (MRI) scanning maching ಗಳನ್ನು VIMS ಬಳ್ಳಾರಿ ಮತ್ತು GIMS ಕಲಬುರಗಿ ಆಸ್ಪತ್ರೆಗಳಿಗೆ ಖರೀದಿ.<br>• Karnataka Multi Sectorial Nutirtion Pilot Project ಕಾರ್ಯಕ್ರಮವನ್ನು ಚಿಂಚೋಳಿ ಮತ್ತು ದೇವದುರ್ಗ ನಿರ್ಮಾಣ ಕಾಮಗಾರಿ<br>• Deposit Contirbution for Kalaburagi Airport Connectivity.<br>• Establishment of Centre of Excellence in Hyderabad Karnataka Region.<br>• NEKRTS ವ್ಯಾಪ್ತಿಯಲ್ಲಿ ಎಲೆಕ್ಟ್ರಿಕಲ್ ಬಸ್ ಸೌಕರ್ಯ (Innovation trial Run).<br>• Deposit Contribution towards development of Airport of Raichur |
| **ಇ)** | ಕೆ.ಕೆ.ಆರ್.ಡಿ.ಬಿ ಅನುದಾನ ಸದ್ಬಳಕೆಗೆ ವಿಶೇಷ ಕಾಳಜಿ ವಹಿಸಲಾಗುವುದೇ? | -ಹೌದು- |

ಸಂಖ್ಯೆ: ಪಿಡಿಎಸ್ 213 ಹೆಚ್ ಕೆಡಿ 2023

**(ಡಿ.ಸುಧಾಕರ್)**
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ ಸಚಿವರು.